ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ:ವಾತೆಅಆ/ಗು&ಸ/ಸಆ/ಸಿ.ಆರ್-22/2010-11

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ
(ಕರ್ನಾಟಕ), 1ನೇ ಮಹಡಿ, ವಿಟಿಕೆ,
ಗಾಂಧೀನಗರ, ಬೆಂಗಳೂರು-560009,
ದೂ:080-22264495, ಫ್ಯಾಕ್ಸ್-080-22263595

## ವಾಣಿಜ್ಯ ತೆರಿಗೆಗಳ ಆಯುಕ್ತರವರ ಸುತ್ತೋಲೆ ಸಂಖ್ಯೆ.18/2010-11 ದಿನಾಂಕ 31-01-2011

ವಿಷಯ: ದಿನಾಂಕ 25-01-2011ರ ಹೊಸ 'e-SUGAM' ಅಧಿಸೂಚನೆಯನ್ವಯ ಕಡ್ಡಾಯಪಡಿಸಿದ ಸರಕು ಸಾಗಣೆ ವಿವರಗಳನ್ನು ಇಲಾಖೆಯ ಅಂತರ್ಜಾಲ ತಾಣದಲ್ಲಿ ತುಂಬಲು ವರ್ತಕ ಬಂಧುಗಳ ಮನವೊಲಿಸುವ ಬಗೆಗೆ ಸೂಚನೆ.

ಉಲ್ಲೇಖ:
1) ವಾಣಿಜ್ಯ ತೆರಿಗೆಗಳ ಆಯುಕ್ತರವರ ಅಧಿಸೂಚನೆ ಸಂಖ್ಯೆ:ವಾತೆಅಆ/ಸಆ/ಸಿಆರ್-22/2010-11 ದಿನಾಂ 25-01-2011.
2) ವಾಣಿಜ್ಯ ತೆರಿಗಗಳ ಆಯುಕ್ತರವರ ಸುತ್ತೋಲೆ ಸಂಖ್ಯೆ..17/2010-11 ದಿನಾಂಕ 25-01-2011.

*****

'e-SUGAM'ಗೆ ಸಂಬಂಧಿಸಿದ ಹೊಸ ಅಧಿಸೂಚನೆಯನ್ನು ದಿನಾಂಕ 25-01-2011 ರಂದು ಹೊರಡಿಸಲಾಗಿದೆ. ಈ ಹೊಸ ಅಧಿಸೂಚನೆಯು ದಿನಾಂಕ 01-02-2011 ರಿಂದ ಜಾರಿಗೆ ಬರುತ್ತದೆ. ಹೊಸ 'e-SUGAM'ದ ಪ್ರಾಮುಖ್ಯತೆ ಮತ್ತು ರೂಪುರೇಷೆಗಳನ್ನು ಈಗಾಗಲೇ ಉಲ್ಲೇಖ (2)ರ ಸುತ್ತೋಲೆ ಸಂಖ್ಯೆ.17/2010-11 ದಿನಾಂಕ 25-01-2011ರಲ್ಲಿ ತಿಳಿಸಲಾಗಿದೆ. ಸದರಿ ಅಧಿಸೂಚನೆಯಲ್ಲಿ ಎಲ್ಲಾ ವರ್ತಕ ಬಂಧುಗಳು 'e-SUGAM'ದಲ್ಲಿ ಇಲಾಖಾ ಜಾಲ ತಾಣದಲ್ಲಿ ಕಡ್ಡಾಯವಾಗಿ ನಮೂದಿಸಬೇಕಾದ ಸರಕುಗಳನ್ನು ಹೆಸರಿಸಲಾಗಿದೆ.

ದಿನಾಂಕ 25-01-2011ರ ಆಯುಕ್ತರವರ ಅಧಿಸೂಚನೆಯನ್ನು ಹೊರಡಿಸಿದ ನಂತರ ಕೆಲವೊಂದು ವ್ಯಾಪಾರೀ ಸಂಸ್ಥೆಗಳು ಈ ಕಛೇರಿಗೆ ಮನವಿಯನ್ನು ಸಲ್ಲಿಸಿ ಹೊಸ 'e-SUGAM' ಅಳವಡಿಸುವಲ್ಲಿ ಇಲಾಖೆಯು ನೀಡಿರುವ ಕಾಲಾವಕಾಶವು ಕಡಿಮೆಯಾಯಿತೆಂದೂ, ಅನೇಕ ವರ್ತಕರಿಗೆ ಗಣಕ ಯಂತ್ರಗಳ ಸೌಲಭ್ಯ ಇರುವುದಿಲ್ಲವೆಂತಲೂ, ವಿದ್ಯುಚ್ಛಕ್ತಿಯ ಸರಬರಾಜಿನಲ್ಲಿ ಆಗಾಗ ವ್ಯತ್ಯಯವಾಗುವುದರಿಂದ ಅಂತರ್ಜಾಲವನ್ನು ಸಂದರ್ಶಿಸಲು ಕಷ್ಟಸಾಧ್ಯವೆಂದೂ ಕಡ್ಡಾಯಪಡಿಸಿದ ಸರಕುಗಳನ್ನು ಇಲಾಖೆಯ ಅಂತರ್ಜಾಲ ತಾಣದಲ್ಲಿ ನಮೂದಿಸುವಲ್ಲಿ ಕೊಂಚ ಹೆಚ್ಚು-ಕಡಿಮೆಯಾದರೂ ಇಲಾಖೆಯ ಅಧಿಕಾರಿಗಳು ದಂಡವನ್ನು ವಿಧಿಸುವ ಸಂಭವವಿದೆಯೆಂದೂ ತಮ್ಮ ಅಳಲನ್ನು ತೋಡಿಕೊಂಡಿರುತ್ತಾರೆ.

ವರ್ತಕ ಬಂಧುಗಳ/ವ್ಯಾಪಾರೀ ಸಂಸ್ಥೆಗಳ ಮನವಿಯನ್ನು ಪರಿಗಣಿಸಲಾಗಿದೆ. ಹೊಸ 'e-SUGAM' ಅಧಿಸೂಚನೆಯು ಜಾರಿಗೆ ಬಂದ ದಿನಾಂಕದಿಂದ ಒಂದು ತಿಂಗಳು ಅಂದರೆ (ದಿನಾಂಕ 01-02-2011 ರಿಂದ 28-02-2011ರ ವರೆಗಿನ ಅವಧಿ) ಫೆಬ್ರವರಿ ತಿಂಗಳನ್ನು 'e-SUGAM' ಅಧಿಸೂಚನೆಯ ಅನುಷ್ಠಾನ ಮಾಸವೆಂದು ಆಚರಿಸಿ ವರ್ತಕ ಬಂಧುಗಳಿಗೆ 'e-SUGAM'ನ ಅಧಿಸೂಚನೆಯಲ್ಲಿನ ನಿಯಮಗಳನ್ನು ಹೇಗೆ ಪಾಲಿಸಬೇಕು, ಅದರ ಉಪಯೋಗಗಳೇನು ಎಂದು ತಿಳಿಹೇಳಿ ಮುಂಬರುವ ದಿನಗಳಲ್ಲಿ 'e-SUGAM'ನ ಉಪಯೋಗವನ್ನು ಹೆಚ್ಚು ಹೆಚ್ಚು ಪಡೆದುಕೊಳ್ಳುವಂತೆ ವರ್ತಕ ಬಂಧುಗಳ ಮನವೊಲಿಸಬೇಕು. ಆದುದರಿಂದ **ದಿನಾಂಕ 25-01-2011ರ ಹೊಸ ಅಧಿಸೂಚನೆಯಲ್ಲಿ ಹೊಸದಾಗಿ ಸೇರ್ಪಡೆಗೊಂಡ ಸರಕುಗಳ ವಿವರಗಳನ್ನು ಇಲಾಖೆಯ ಜಾಲ ತಾಣದಲ್ಲಿ ನಮೂದಿಸದಿದ್ದಲ್ಲಿ 2011ರ ಫೆಬ್ರವರಿ ಮಾಸದಲ್ಲಿ ದಂಡ ವಿಧಿಸುವ ಪ್ರಕ್ರಿಯೆ ಬೇಡ.**

'e-SUGAM' ಅನ್ನು ವರ್ತಕ ಸ್ನೇಹಿಯನ್ನಾಗಿಸುವ ದಿಶೆಯಲ್ಲಿ ನಮ್ಮ ತನಿಖಾ ಠಾಣೆಯ ಅಧಿಕಾರಿಗಳು, ಚಲಿಸುವ ದಳದ ಅಧಿಕಾರಿಗಳು ಹಾಗೂ ಜಾರಿ ವಿಭಾಗದ ಅಧಿಕಾರಿಗಳು ವರ್ತಕ ಬಂಧುಗಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಇಲಾಖಾ ಜಾಲ ತಾಣದಲ್ಲಿ ಸಾಗಾಣಿಕೆಯ ವಿವರಗಳನ್ನು ಸುಲಭವಾಗಿ ನಮೂದಿಸಲು ಎಲ್ಲಾ ರೀತಿಯಲ್ಲೂ ಸಹಾಯ ಮಾಡಬೇಕು ಹಾಗೂ ಫೆಬ್ರವರಿ ಮಾಸದ ನಂತರ ಎಲ್ಲಾ ವರ್ತಕ ಬಂಧುಗಳು ಯಾರ ಸಹಾಯವಿಲ್ಲದೆ ಸ್ವತಃ ತಾವೇ ಇಲಾಖೆಯ ಜಾಲ ತಾಣದಲ್ಲಿ ತಮ್ಮ ಸರಕು ಸಾಗಣೆಯ ವಿವರಗಳನ್ನು ಬಹುಸುಲಭವಾಗಿ ನಮೂದಿಸುವಂತಾಗಬೇಕು.

ಗಣಕ ಯಂತ್ರ ಅನುಕೂಲವಿಲ್ಲದ ಅನೇಕ ವರ್ತಕ ಬಂಧುಗಳು ತಮ್ಮ ಮೊಬೈಲ್ ದೂರವಾಣಿಯ ಮೂಲಕವೇ ಸರಕು ಸಾಗಣೆಯ ವಿವರಗಳನ್ನು ಇಲಾಖೆಯ ಅಂತರ್ಜಾಲ ತಾಣದಲ್ಲಿ ನಮೂದಿಸಲು ಮುಂದಿನ 8-10 ದಿನಗಳಲ್ಲಿ ಅನುವು ಮಾಡಿಕೊಡಲಾಗುವುದು.

ಈ ದಿಶೆಯಲ್ಲಿ ನಮ್ಮ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿಯು ಮನಃಪೂರ್ವಕವಾಗಿ 2011ರ ಫೆಬ್ರವರಿ ಮಾಸವನ್ನು 'e-SUGAM' ಅನುಷ್ಠಾನ ಮಾಸವೆಂದು ಆಚರಿಸುತ್ತಾರೆಂಬ ಪೂರ್ಣ ನಂಬಿಕೆಯಿದೆ.

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.